| | |
|---|---|
| ಪ್ರಾಸಾ | 09 |
| ಚಾಸಾ | 06 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ವಿಶೇಷ ಸತ್ರ ಪ್ರಕರಣ ಸಂಖ್ಯೆ: 123/2023

(1 ಮತ್ತು 2 ನೇ ಆರೋಪಿತರನ್ನು ವಿ.ಸಿ ಮುಖಾಂತರ ವಿಚಾರಣೆಗೆ ಹಾಜರುಪಡಿಸಲಾಗಿದೆ)

**ದಿನಾಂಕ: 02.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಶಿಕಲಾ |
| ಗಂಡನ ಹೆಸರು | : | ನಾರಾಯಣಸ್ವಾಮಿ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಬೈರಗಾನಹಳ್ಳಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

**1.** ಮೃತ ನಾರಾಯಣಸ್ವಾಮಿ ನನ್ನ ಗಂಡ. ಪ್ರಾಸಾ-3 ಸದರಿ ನಾರಾಯಣಸ್ವಾಮಿರವರ ಮೊದಲನೆ ಹೆಂಡತಿ. ಪ್ರಾಸಾ-1 ನನ್ನ ಮಗ, ಪ್ರಾಸಾ-2,4,5,6,7,8 ಹಾಗೂ ಚಾಸಾ-8 ಗೊತ್ತು. ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿತರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ 3,4,6 ನೇ

| | |
|---|---|
| ಪ್ರಾಸಾ | 09 |
| ಚಾಸಾ | 06 |

ಆರೋಪಿ ಗೊತ್ತು. ನ್ಯಾಯಾಲಯದ ಮುಂದಿರುವ 5 ನೇ ಆರೋಪಿ ನನಗೆ ಗೊತ್ತಿಲ್ಲ.

**2.** ನಾನು ಹಾಗೂ ಮೃತ ನಾರಾಯಣಸ್ವಾಮಿ ಹೊಲೆಯ ಜಾತಿಗೆ ಸೇರಿರುತ್ತೆವೆ. 1 ರಿಂದ 4 ನೇ ಆರೋಪಿತರು ಒಕ್ಕಲಿಗ ಜಾತಿಗೆ ಸೇರಿರುತ್ತಾರೆ. 6 ನೇ ಆರೋಪಿ ಹೊಲೆಯ ಜಾತಿಗೆ ಸೇರಿರುತ್ತಾರೆ.

**3.** ನನ್ನ ಗಂಡ ನಾರಾಯಣಸ್ವಾಮಿರವರು ನಮ್ಮ ಊರಿನಲ್ಲಿ ಯಾವುದಾದರೂ ಗಲಾಟೆ, ತಕರಾರುಗಳಾದ ಬಗೆ ಹರಿಸುತ್ತಿದ್ದರು. 6 ನೇ ಅರೋಪಿಯು 1 ನೇ ಆರೋಪಿಯ ತೋಟದ ಕೆಲಸಕ್ಕೆ ಹೋಗುತ್ತಿದ್ದಾಗ, 6 ನೇ ಆರೋಪಿಗೂ 1 ನೇ ಆರೋಪಿಗೂ ಸಂಬಂಧ ಬೆಳೆದಿರುತ್ತದೆ. ನಾರಾಯಣಸ್ವಾಮಿರವರು ಮೃತರಾಗುವುದಕ್ಕಿಂತ ಸುಮಾರು 15 ದಿವಸದ ಮೊದಲು, 1 ನೇ ಆರೋಪಿಯು ದ್ವಿಚಕ್ರ ವಾಹನದಲ್ಲಿ ಬಂದು ಮೊಬೈಲ್ ನ್ನು 6 ನೇ ಆರೋಪಿಯ ಮನೆಗೆ ಎಸೆದು ಹೋಗಿದ್ದನು. ಆಗ ಚಾಸಾ-8 ರವರು 1 ನೇ ಆರೋಪಿಗೆ ಹೊಡೆದಿದ್ದರು. ಸದರಿ ಮೊಬೈಲ್ ಫೋನ್ ಎಸೆದ ವಿಚಾರವನ್ನು 6 ನೇ ಆರೋಪಿ ನನ್ನ ಗಂಡ ನಾರಾಯಣಸ್ವಾಮಿರವರಿಗೆ ಹೇಳಿದ್ದರು. ಈ ಬಗ್ಗೆ ನನ್ನ ಗಂಡ ಪೊಲೀಸ್ ಠಾಣೆಗೆ

| | |
|---|---|
| ಪ್ರಾಸಾ | 09 |
| ಚಾಸಾ | 06 |

ದೂರು ನೀಡುವಂತೆ 6 ನೇ ಆರೋಪಿಗೆ ಸಲಹೆ ನೀಡಿರುತ್ತಾರೆ. ನಂತರ 6 ನೇ ಆರೋಪಿಯು ದಿಬ್ಬೂರಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಠಾಣೆಗೆ 1 ನೇ ಆರೋಪಿ ಹಾಗೂ ಅವರ ಮನೆಯವರನ್ನು, ಚಾಸಾ-8 ,6 ನೇ ಆರೋಪಿರವರನ್ನು ಕರೆಯಿಸಿದ್ದರು. ಸದರಿ ಠಾಣೆಯಲ್ಲಿ ಮಾತನಾಡಿಕೊಂಡು ಎಲ್ಲರೂ ಠಾಣೆಯಿಂದ ಹೊರಗೆ ಬಂದಾಗ, 1 ನೇ ಆರೋಪಿಯು ನಾರಾಯಣಸ್ವಾಮಿರವರಿಗೆ ನಿನ್ನನ್ನು ನೋಡಿಕೊಳ್ಳುತ್ತೆನೆಂದು ಬೆದರಿಕೆ ಹಾಕಿದ್ದರು. ಆಗ ನಾರಾಯಣಸ್ವಾಮಿರವರು ನಿನ್ನಿಂದ ಏನಾಗುತ್ತದೊ ನೋಡಿಕೊಳ್ಳುತ್ತೆವೆಂದು ಹೇಳಿದ್ದರು. ಸದರಿ ವಿಚಾರಗಳನ್ನು ನಾರಾಯಣಸ್ವಾಮಿರವರು ನನ್ನ ಬಳಿ ಹೇಳಿದ್ದರು.

**4.** ಸುಮಾರು ಒಂದು ವರ್ಷದ ಹಿಂದೆ ನನ್ನ ಗಂಡ ನಾರಾಯಣಸ್ವಾಮಿರವರು ತಮ್ಮ ಓಮ್ನಿ ಕಾರಿನಲಿಲ ಶಿಡ್ಲಘಟ್ಟಕ್ಕೆ ಹೋಗಿ ವಾಪಸ್ಸು ಬರುತ್ತಿದ್ದಾಗ, ಅವರಿಗೆ ಖಾರದ ಪುಡಿ ಎರಚಿರುತ್ತಾರೆ. ನಾರಾಯಣಸ್ವಾಮಿರವರು ಓಡಿ ಹೋಗಲು ಪ್ರಯತ್ನಿಸಿದಾಗ ಅವರನ್ನು ಕೊಲೆ ಮಾಡಿರುತ್ತಾರೆ. ನಾರಾಯಣಸ್ವಾಮಿರವರನ್ನು ಯಾರು ಕೊಲೆ ಮಾಡಿದ್ದಾರೆಂದು ನನಗೆ ತಿಳಿದಿಲ್ಲ. 1 ರಿಂದ 3 ನೇ ಆರೋಪಿತರು

| | |
|---|---|
| ಪ್ರಾಸಾ | 09 |
| ಚಾಸಾ | 06 |

ನಾರಾಯಣಸ್ವಾಮಿರವರನ್ನು ಕೊಲೆ ಮಾಡಿದ್ದಾರೆಂದು ಪ್ರಾಸಾ-3 ರವರು ಹೇಳಿದ್ದರಿಂದ ನಂತರ ಗೊತ್ತಾಗಿರುತ್ತದೆ. 1 ನೇ ಆರೋಪಿ ಹಾಗೂ 6 ನೇ ಆರೋಪಿಯ ವಿಚಾರದಲ್ಲಿ ನಾರಾಯಣಸ್ವಾಮಿರವರು ನ್ಯಾಯ ಪಂಚಾಯ್ತಿ ಮಾಡಲು ಹೋದ ಕಾರಣದಿಂದ ಅವರನ್ನು ಕೊಲೆ ಮಾಡಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-**

**5.** ಪೊಲೀಸರಿಗೆ ನಾನು ಘಟನೆಯ ಬಗ್ಗೆ ಹೇಳಿಕೆ ನೀಡಿದ್ದೆನೆಂದರೆ ಸರಿಯಲ್ಲ. 1 ನೇ ಆರೋಪಿ ಹಾಗೂ 6 ನೇ ಆರೋಪಿಯ ಅಕ್ರಮ ಸಂಬಂಧದ ವಿಚಾರದ ಹಿನ್ನಲೆಯಲ್ಲಿ 6 ನೇ ಆರೋಪಿಯ ಕುಮ್ಮಕ್ಕಿನಿಂದ 1 ರಿಂದ 5 ನೇ ಆರೋಪಿತರು ನಾರಾಯಣಸ್ವಾಮಿರವರನ್ನು ಕೊಲೆ ಮಾಡಲು ಸಂಚು ರೂಪಿಸಿ, 4 ನೇ ಆರೋಪಿಯ ಸಹಕಾರದಿಂದ, 1 ರಿಂದ 3 ನೇ ಆರೋಪಿತರು ಸುರೇಶ್ ರವರ ಜಮೀನಿನಲ್ಲಿ ನಾರಾಯಣಸ್ವಾಮಿರವರನ್ನು ಕೊಲೆ ಮಾಡಿದ್ದಾರೆಂದು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ. ಎಲ್ಲಾ ವಿಚಾರ ನನಗೆ

| | |
|---|---|
| ಪ್ರಾಸಾ | 09 |
| ಚಾಸಾ | 06 |

ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 4ನೇ ಆರೋಪಿತರ ಪರ ಶ್ರೀಎಂ.ಜಿ.ಎಸ್.ಆರ್ ವಕೀಲರಿಂದಃ**

**6.** ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳನ್ನು ಈ ನ್ಯಾಯಾಲಯದಲ್ಲಿ ಪ್ರಥಮ ಬಾರಿಗೆ ಹೇಳಿದ್ದೇನೆಂದರೆ ಸರಿ. ನನ್ನ ಗಂಡ ಯಾವುದೇ ವಿಚಾರಗಳನ್ನು ನನಗೆ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಗಂಡನ ಕೊಲೆಗೆ ಕಾರಣರೆಂದು ನನ್ನ ಅಕ್ಕ ಪ್ರಾಸಾ-3 ರವರು ಹೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇತ್ತಿಚೇಗೆ ಪ್ರಾಸಾ-3 ರವರು ಸದರಿ ನನ್ನ ಗಂಡನ ಕೊಲೆಗೆ ಕಾರಣರಾದವರನ್ನು ಹೇಳಿದರು ಎಂದು ಹೇಳುತ್ತಾರೆ.

**7.** ನನ್ನ ಗಂಡ ಶಿಡ್ಲಘಟ್ಟದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ನನ್ನ ಗಂಡನಿಗೆ ಹಲವಾರು ಜನ ವಿರೋಧಿಗಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಘಟನೆಗಿಂತ ಮೊದಲು ಸದರಿ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಗಲಾಟೆಯಾಗಿ

| | |
|---|---|
| ಪ್ರಾಸಾ | 09 |
| ಚಾಸಾ | 06 |

ನಾರಾಯಣಸ್ವಾಮಿರವರ ಕಾಲಿಗೆ ಏಟಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಕಲ್ಲು ಕೊಯ್ಯುವ ಯಂತ್ರ ಒಂದು ಬಾರಿ ತಾಗಿತ್ತು ಎಂದು ಹೇಳುತ್ತಾರೆ. 1 ನೇ ಆರೋಪಿಗೂ 6 ನೇ ಆರೋಪಿಗೂ ಯಾವುದೇ ಅಕ್ರಮ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ 6 ನೇ ಆರೋಪಿಯ ಮನೆಯ ಬಳಿ ಯಾವುದೇ ಗಲಾಟೆಗಳು ಆಗಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರದ ಹಿನ್ನಲೆಯಲ್ಲಿ ಪೊಲೀಸ್ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಪ್ರಾಸಾ-1 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಕೆ ಎಂ ಎಂ  ವಕೀಲರಿಂದಃ</u>**

ಕುಮಾರಿ ಇ.ವಿ. ವಕೀಲರು ಶ್ರೀ ಕೆ.ಎಂ.ಎಂ ವಕೀಲರ ಪರ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**<u>ಪಾಟೀ ಸವಾಲುಃ 6 ನೇ ಆರೋಪಿ ಪರ ಶ್ರೀಹೆಚ್ ಸಿ ಪಿ  ವಕೀಲರಿಂದಃ</u>**

ಶ್ರೀ. ಹೆಚ್.ಸಿ.ಪಿ. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

| | |
|---|---|
| ಪ್ರಾಸಾ | 09 |
| ಚಾಸಾ | 06 |

**ಮರುವಿಚಾರಣೆ: ಇಲ್ಲ.**

**(ದಿನಾಂಕ: 02.09.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಶಿವಪ್ರಸಾದ್.ಕೆ.ಬಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**